ಕುಮುಟಾ ಹಾಗೂ ಹೊನ್ನಾವರ ಆಸ್ಪತ್ರೆಗಳ ನಿರ್ಮಾಣದ ಕಾಮಗಾರಿ ಪ್ರಗತಿ.

1057(1674)

ಡಾ || ಎಂ.ಪಿ. ಕರ್ಕಿ (ಕುಮಟ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕುಮಟಾ ಹಾಗೂ ಹೊನ್ನಾವರ ಆಸ್ಪತ್ರೆಗಳ ನಿರ್ಮಾಣ ಕಾರ್ಯವನ್ನು ಕೆಹೆಚ್‌ಎಸ್‌ಡಿಪಿಗೆ ವಹಿಸಲಾಗಿದೆಯೇ

ಆ) ಈ ಎರಡೂ ಆಸ್ಪತ್ರೆಗಳಿಗೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು ?

ಇ) ಈ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆಯೇ ? ಹಾಗಿದ್ದರೆ ಟೆಂಡರ್‌ನ ಪ್ರಕ್ರಿಯೆ ಪೂರ್ಣಗೊಂಡಿದೆಯೆ ? ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುತ್ತದೆ ?

ಡಾ || ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಕುಮಟಾ ಆಸ್ಪತ್ರೆಗೆ ಯೋಜನಾ ವರದಿಯಲ್ಲಿ ರೂ. 30.40 ಲಕ್ಷ ನಿಗದಿಪಡಿಸಲಾಗಿದೆ. ಹೊನ್ನಾವರ ಆಸ್ಪತ್ರೆಗೆ ರೂ. 84.00ಲಕ್ಷದ ಅಂದಾಜು ಮಂಜೂರಾಗಿದೆ.

ಇ) ಕುಮಟಾ ಆಸ್ಪತ್ರೆಯ ಪ್ರಾರಂಭಿಕ ನಕ್ಷೆ ವಿಶ್ವಬ್ಯಾಂಕ್ ನಿಂದ ಅನುಮೋದಿತವಾಗಿದ್ದು, ವಿವರವಾದ ನಕ್ಷೆ ಮತ್ತು ಅಂದಾಜು ತಯಾರಿಕಾ ಹಂತದಲ್ಲಿದೆ. ಹೊನ್ನಾವರ ಆಸ್ಪತ್ರೆಯ ಕಾಮಗಾರಿಯನ್ನು ರೂ. 71.79ಲಕ್ಷ ವೆಚ್ಚದಲ್ಲಿ ಗುತ್ತಿಗೆ ವಹಿಸಲಾಗಿದ್ದು, ಮೇ 1999ರಲ್ಲಿ ಕೆಲಸ ಪ್ರಾರಂಭವಾಗಿದೆ.

ಗ್ರಾಮೀಣ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ.

1058(1557)

ಶ್ರೀ ಎಸ್.ಪಿ. ಮುದ್ದ ಹನುಮೇಗೌಡ (ಕುಣಿಗಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗ್ರಾಮೀಣ ಭಾಗದಲ್ಲಿರುವ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ಈ ಕೊರತೆಯಿಂದ ಎಸ್.ಎಸ್.ಎಲ್.ಸಿ. ಫಲಿತಾಂಶ ಕಡಿಮೆಯಾಗಿರುವುದು ನಿಜವೆ.

ಇ) ಈ ಸಮಸ್ಯೆಗೆ ಸರ್ಕಾರ ಕೈಕೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮವೇನು?

ಶ್ರೀ ಹೆಚ್. ಜಿ. ಗೋವಿಂದೆಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.) :

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಗ್ರಾಮ ಪಂಚಾಯತ್‌ಗಳ ಪುನರ್ ರಚನೆ ಕಾರ್ಯದ ಪ್ರಗತಿ.

1059(1560)

ಶ್ರೀ ಎಸ್.ಪಿ. ಮುದ್ದಹನುಮೇಗೌಡ. (ಕುಣಿಗಲ್)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.